BHIMAPPA SOMAPPA NAVI

Digitally signed by BHIMAPPA SOMAPPA NAVI
DN: c=IN, o=KARNATAKA STATE AKKAMAHADEVI WOMENS UNIVERSITY VIJAYAPURA, ou=NA, 2.5.4.20=db7789db39afe1f3d852b09ea3497499328f50a9eb82c5e3eb9b8da79cde486e, postalCode=586108, st=KARNATAKA, serialNumber=a2019af0af54b531e19e9c7b6fbd664dec1569beb802de3505e28213b85e6333, cn=BHIMAPPA SOMAPPA NAVI
Date: 2023.08.10 11:38:53 +05'30'



# ಚಿಂತನೆ ಗುಣ ವೃದ್ಧಿಗೆ ಸಹಕಾರಿ

## ಅರುಣ ಶಹಾಪುರ ಅಭಿಮತ | ರಾಷ್ಟ್ರೀಯ ಶಿಕ್ಷಣ ನೀತಿ ಕುರಿತ ವೆಬಿನಾರ್

■ ವಿಜಯವಾಣಿ ಸುದ್ದಿಜಾಲ ವಿಜಯಪುರ

21ನೇ ಶತಮಾನಕ್ಕೆ ಅಗತ್ಯವಾಗಿರುವ ಕೌಶಲಗಳನ್ನು ಬೆಳೆಸಬೇಕಾದರೆ ಮಕ್ಕಳು ಹೇಗೆ ಚಿಂತಿಸಬೇಕು ಎಂಬುದನ್ನು ನಾವು ಹೇಳಿ ಕೊಡಬೇಕಾಗುತ್ತದೆ ಎಂದು ರಾಷ್ಟ್ರೀಯ ಶಿಕ್ಷಣ ನೀತಿ-2020ರ ಕಾರ್ಯಪಡೆ ಸದಸ್ಯ ಹಾಗೂ ವಿಧಾನ ಪರಿಷತ್ ಸದಸ್ಯ ಅರುಣ ಶಹಾಪುರ ಹೇಳಿದರು.

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿವಿ ರಾಷ್ಟ್ರೀಯ ಮೌಲೀಕರಣ ಮತ್ತು ಮಾನ್ಯತಾ ಪರಿಷತ್ ಆಂತರಿಕ ಗುಣಮಟ್ಟ ಭರವಸೆ ಕೋಶ ಇವರ ಸಹಯೋಗದಲ್ಲಿ ವಿವಿಯ ಕನ್ನಡ ಅಧ್ಯಯನ ಸಭಾಂಗಣದಲ್ಲಿ 'ರಾಷ್ಟ್ರೀಯ ಶಿಕ್ಷಣ ನೀತಿ' ಕುರಿತಾಗಿ ಜರುಗಿದ ಒಂದು ದಿನದ ವೆಬಿನಾರ್‌ನಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.



ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಶಿಕ್ಷಣ ನೀತಿ ಜಾರಿಯಾಗಿದ್ದು, ಇಂದಿನ ವೈಜ್ಞಾನಿಕ ಯುಗದಲ್ಲಿ ನಮಗೆ ಬಹುಬೇಗನೆ ಮಾಹಿತಿಗಳು ಲಭ್ಯವಾಗುತ್ತವೆ. ಆದರೆ ಲಭ್ಯವಿರುವ ಮಾಹಿತಿಯಲ್ಲಿ ಸೂಕ್ತವಾದದ್ದನ್ನು ಆಯ್ಕೆ ಮಾಡುವುದೇ ನಮ್ಮ ಮಕ್ಕಳ ಮುಂದಿರುವ ಬಹು ದೊಡ್ಡ ಸವಾಲು. ಸರಿ ಮತ್ತು ತಪ್ಪಿನ, ಸೂಕ್ತ ಮತ್ತು ಸೂಕ್ತವಲ್ಲದ ನಡುವಿನ ವ್ಯತ್ಯಾಸವನ್ನು ತಿಳಿಯುವಂತಹ ಚಿಂತನಾಶಕ್ತಿಯನ್ನು ಬೆಳೆಸಬಹುದಾದಂತಹ ಶೈಕ್ಷಣಿಕ ವ್ಯವಸ್ಥೆಯನ್ನು ನೀಡಲು ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಬದ್ಧವಾಗಿದೆ. ಈ ನೀತಿಯನ್ನು ಅಳವಡಿಸುವುದರಲ್ಲಿ ನಾವೆಲ್ಲರೂ ಕೈ ಜೋಡಿಸುವ ಮೂಲಕ ಒಟ್ಟಾಗಿ ಕಾರ್ಯನಿರ್ವಹಿಸಿ ಅದನ್ನು ಯಶಸ್ವಿಗೊಳಿಸೋಣ ಎಂದರು. ಉದ್ಘಾಟನೆ ನೆರವೇರಿಸಿದ ವಿವಿ ಕುಲಪತಿ ಪ್ರೊ.ಓಂಕಾರ ಕಾಕಡೆ ಮಾತನಾಡಿ, ರಾಷ್ಟ್ರೀಯ ಶಿಕ್ಷಣ ನೀತಿ ಕುರಿತಾಗಿ ಅರುಣ ಶಹಾಪುರ ಅವರಂಥ ಸಂಪನ್ಮೂಲ ವ್ಯಕ್ತಿ ನಮಗೆ ಸಿಕ್ಕಿದ್ದು ತುಂಬ ಸಂತಸದ ಸಂಗತಿ. ಅವರು ಈಗಾಗಲೇ ಈ ಹೊಸ ಶಿಕ್ಷಣ ನೀತಿಯ ಕುರಿತಾಗಿ ರಾಜ್ಯದ ಹಲವಾರು ಭಾಗಗಳಲ್ಲಿ ಕಾರ್ಯಾಗಾರಗಳಲ್ಲಿ ಮಾತನಾಡಿದ್ದಾರೆ. ಇಂದು ನಮ್ಮೊಂದಿಗಿದ್ದು ಹೊಸ ಶಿಕ್ಷಣ ನೀತಿ ಬಗ್ಗೆ ಮಾತನಾಡುತ್ತಿರುವುದು ನಮಗೆ ಖುಷಿ ತಂದಿದೆ ಎಂದರು.

ಕುಲಸಚಿವೆ ಪ್ರೊ.ಆರ್. ಸುನಂದಮ್ಮ ಅಧ್ಯಕ್ಷತೆ ವಹಿಸಿದ್ದರು. ಮೌಲ್ಯಮಾಪನ ಕುಲಸಚಿವ ಪ್ರೊ.ಪಿ.ಜಿ. ತಡಸದ, ವಿವಿಧ ವಿಭಾಗದ ಮುಖ್ಯಸ್ಥರು, ಪ್ರಾಧ್ಯಾಪಕರು ಭಾಗಿಯಾಗಿದ್ದರು. ಐಕ್ಯೂಎಸಿ ಸಹಾಯಕ ನಿರ್ದೇಶಕ ಮಠಪತಿ ಸ್ವಾಗತಿಸಿದರು. ಪ್ರಾಧ್ಯಾಪಕಿ ರೋಹಿಣಿ ಭೂಸನೂರಮಠ ವಂದಿಸಿದರು. ರೇಣುಕಾ ಮೇಟಿ ನಿರೂಪಿಸಿದರು.



ಮುದ್ದೇಬಿಹಾಳ ಪಟ್ಟಣದ ಎಂಜಿವಿಸಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಶಿಕ್ಷಣ ನೀತಿ-2020 ಮಾಹಿತಿ ಕಾರ್ಯಾಗಾರಕ್ಕೆ ವಿಧಾನ ಪರಿಷತ್ ಸದಸ್ಯ ಅರುಣ ಶಹಾಪುರ ಚಾಲನೆ ನೀಡಿದರು. ಸಿದ್ದು ಹಂಚಿನಾಳ, ಅಶೋಕ ತಡಸದ, ಬಿಇಒ ವೀರೇಶ ಜೇವರಗಿ, ರವೀಂದ್ರ ತುಂಗಳ, ಶಿವಾನಂದ ಗುದ್ನೋಡಗಿ, ಪ್ರಾಚಾರ್ಯ ಎ.ಬಿ. ಕುಲಕರ್ಣಿ ಇದ್ದರು.

## 34 ವರ್ಷ ಬಳಿಕ ಶಿಕ್ಷಣ ನೀತಿ ಜಾರಿ

> ಭಾಷೆಯನ್ನು ಕಲಿಕೆಯ ಸಾಧನವಾಗಿ ನೋಡಬೇಕು. ವಿದೇಶಿ ಭಾಷೆಯನ್ನು ಕಲಿಸಲು ಅವಕಾಶ ಮಾಡಿಕೊಡಬೇಕು. ಜಾಗತಿಕ ಸ್ಪರ್ಧೆಗೆ ಭಾರತದ ಮಕ್ಕಳು ಸಿದ್ಧರಾಗಬೇಕು. ಭಾಷೆಯಿಂದ ಒಬ್ಬರನ್ನೊಬ್ಬರನ್ನು ಪ್ರೀತಿಸುವ ಕಾರ್ಯ ಆಗಬೇಕು.
>
> | ಅರುಣ ಶಹಾಪುರ
> ವಿಧಾನ ಪರಿಷತ್ ಸದಸ್ಯ

ಮುದ್ದೇಬಿಹಾಳ: ಪ್ರಧಾನಿ ನರೇಂದ್ರ ಮೋದಿಯವರ ಇಚ್ಛಾಶಕ್ತಿ ಫಲವಾಗಿ 34 ವರ್ಷಗಳ ನಂತರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಲಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಅರುಣ ಶಹಾಪುರ ಹೇಳಿದರು. ಪಟ್ಟಣದ ಎಂಜಿವಿಸಿ ಕಾಲೇಜಿನಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಶಿಕ್ಷಣ ನೀತಿ-2020 ಮಾಹಿತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಶಿಕ್ಷಕ ಸಂಘದ ಪ್ರತಿನಿಧಿ ಸಿದ್ದು ಹಂಚಿನಾಳ ಮಾತನಾಡಿದರು. ಕಾಲೇಜಿನ ಕಾರ್ಯಾಧ್ಯಕ್ಷ ಅಶೋಕ ತಡಸದ, ಬಿಇಒ ವೀರೇಶ ಜೇವರಗಿ, ಶಿಕ್ಷಕ ಸಂಘದ ಪ್ರಮುಖರಾದ ರವೀಂದ್ರ ತುಂಗಳ, ಶಿವಾನಂದ ಗುದ್ನೋಡಗಿ, ಪ್ರಾಚಾರ್ಯ ಎ.ಬಿ. ಕುಲಕರ್ಣಿ, ಎಸ್.ಎನ್. ಪೊಲೇಶಿ, ನಿವೃತ್ತ ದೈಹಿಕ ಶಿಕ್ಷಣಾಧಿಕಾರಿ ಎಸ್.ಬಿ. ಚಲವಾದಿ, ಪ್ರಭಾರಿ ದೈಹಿಕ ಶಿಕ್ಷಣ ಪರಿವೀಕ್ಷಕ ಎಚ್.ಎಲ್. ಕರಡ್ಡಿ, ಬಿಆರ್‌ಸಿ ಯು.ಬಿ.ಧರಿಕಾರ, ಟಿ.ಡಿ. ಲಮಾಣಿ, ಬಿ.ಎಸ್.ಪಾಟೀಲ, ಎಸ್.ಆರ್.ನಾಯಕ ಮತ್ತಿತರರು ಇದ್ದರು.

# ಸಂಶೋಧನಾ ಕ್ಷೇತ್ರದಲ್ಲಿ ನಾವು ಇನ್ನು ಬಹಳಷ್ಟು ಹಿಂದಿದ್ದೇವೆ – ಪ್ರಭಾರಿ ಕುಲಪತಿ ಪ್ರೋ ಓಂಕಾರ ಕಾಕಡೆ ಅಭಿಮತ

ವಿಜಯಪುರ,೨೦– "ಸಂಶೋಧನಾ ಕ್ಷೇತ್ರದಲ್ಲಿ ನಾವು ಇನ್ನು ಬಹಳಷ್ಟು ಹಿಂದೆ ಇದ್ದೇವೆ. ಹೀಗಾಗಿ ಸಂಶೋಧನಾ ಕ್ಷೇತ್ರದಲ್ಲಿ ಇನ್ನು ಹೆಚ್ಚು ಹೆಚ್ಚು ಕೆಲಸಗಳು ನಡೆಯಬೇಕು. ಸಂಶೋಧನೆಗಳಾಗಬೇಕು" ಎಂದು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿವಿಯ ಪ್ರಭಾರಿ ಕುಲಪತಿ ಪ್ರೊ.ಓಂಕಾರ ಕಾಕಡೆ ಅಭಿಪ್ರಾಯಪಟ್ಟರು.

ಅವರು ಮಹಿಳಾ ವಿಶ್ವವಿದ್ಯಾನಿಲಯದ ಜ್ಞಾನಶಕ್ತಿ ಆವರಣದ ಕನ್ನಡ ಅಧ್ಯಯನ ಸಭಾಂಗಣದಲ್ಲಿ ವಿವಿಯ ಐಕ್ಯೂಎಸಿ ಹಾಗೂ ಐಟಿಸಿ ಸೆಲ್‌ನ ಸಹಯೋಗದಲ್ಲಿ ಯುಜಿಸಿ ಕೇರ್‌ಲಿಸ್ಟ್‌ನ ಕುರಿತಾಗಿ ಒಂದು ದಿನದ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

"ಸಂಶೋಧನಾ ಕ್ಷೇತ್ರದಲ್ಲಿ ಸಾಕಷ್ಟು ತೊಂದರೆ ಮತ್ತು ಸವಾಲುಗಳು ಇದ್ದು, ಅವುಗಳೆಲ್ಲವನ್ನು ಮೆಟ್ಟಿ ನಿಂತು ನಾವು ಕೆಲಸ ಮಾಡಬೇಕಿದೆ. ಸಂಶೋಧನೆ ಮತ್ತು ಸಂಶೋಧನಾ ಪತ್ರಿಗೆಳನ್ನು ಪ್ರಕಟಪಡಿಸುವ ಎಲ್ಲ ಜ್ಞಾನವನ್ನು ಹೊಂದಿ ತದನಂತರ ನಮ್ಮ ಪತ್ರಿಕೆಗಳನ್ನು ಪ್ರಕಟಿಸಲು ಮುಂದಾಗಬೇಕಿದೆ" ಎಂದರು.




ಸಂಪನ್ಮೂಲ ವ್ಯಕ್ತಿಗಳಾಗಿ ಮಾತನಾಡಿದ ವಿವಿಯ ಮೌಲ್ಯಮಾಪನ ಕುಲಸಚಿವ ಪ್ರೊ.ಪಿ.ಜಿ.ತಡಸದ "ಉತ್ತಮ ಜರ್ನಲ್‌ಗಳಲ್ಲಿ ನಮ್ಮ ಪತ್ರಿಕೆಗಳು ಪ್ರಕಟವಾಗಬೇಕೆಂದರೆ ನಾವು ಕೂಡ ಅಷ್ಟೇ ಶ್ರಮವಹಿಸಿ ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕು" ಎಂದು ಹೇಳಿದರು.

"ನಾವು ಸಂಶೋಧನಾ ಪತ್ರಿಕೆ ಮಾಡುವಾಗ ಎಷ್ಟು ಕಷ್ಟಪಡುತ್ತೇವೋ ಅಷ್ಟೇ ಜಾಗೂರಕತೆಯನ್ನು ಅದನ್ನು ಯಾವ ಜರ್ನಲ್‌ನಲ್ಲಿ ಮಾಡಬೇಕೆನ್ನುವುದಕ್ಕೂ ಜಾಗ್ರತೆ ವಹಿಸಬೇಕು ಎಂದು ಹೇಳಿದ ಅವರು, "ಉತ್ತಮ ಜರ್ನಲ್‌ಗಳಲ್ಲಿ ನಮ್ಮ ಸಂಶೋಧನಾ ಪತ್ರಿಕೆಗಳು ಪ್ರಕಟವಾದರೆ ಮಾತ್ರ ನಮ್ಮ ಸಂಶೋಧನೆಗೆ ಮತ್ತು ಪತ್ರಿಕೆಗೆ ತೂಕ ಬರುತ್ತದೆ" ಎಂದರು.

ಕಾರ್ಯಕ್ರಮದಲ್ಲಿ ವಿವಿಯ ಕುಲಸಚಿವೆ ಪ್ರೊ. ಆರ್. ಸುನಂದಮ್ಮ, ವಿವಿಧ ವಿಭಾಗದ ಮುಖ್ಯಸ್ಥರು, ಪ್ರಾಧ್ಯಾಪಕರು, ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಐಕ್ಯೂಎಸಿ ಸೆಲ್‌ನ ಸಹಾಯಕ ನಿರ್ದೇಶಕ ಡಾ.ಚಂದ್ರಶೇಖರ ಮಠಪತಿ ನಿರೂಪಿಸಿದರು. ಐಕ್ಯೂಎಸಿ ನಿರ್ದೇಶಕ ಪ್ರೊ. ಡಿ. ಎಂ. ಜ್ಯೋತಿ ಸ್ವಾಗತಿಸಿದರು. ಐಸಿಟಿ ಸೆಲ್‌ನ ಸಂಯೋಜಕಿ ರೋಹಿಣಿ ಭೂಸನೂರಮಠ ವಂದಿಸಿದರು.